ಶ್ರೀರಾಮಕೃಷ್ಣ ಮತ್ತು ನನ್ನ ಗುರುವಾದ ಪೂಜ್ಯ ಸ್ವಾಮಿ ಭೂತೇಶಾನಂದಜಿ ಮಹಾರಾಜರ ಚಿತ್ರಪಟಗಳನ್ನು ದಿಟ್ಟಿಸಿ ನೋಡಿದೆ. ನನ್ನ ಗುರುವು ಮಂತ್ರದೀಕ್ಷೆಯ ಸಮಯದಲ್ಲಿ ನನಗೆ ಕೊಟ್ಟ ಮಂತ್ರ ನನ್ನ ನೆನಪಿಗೆ ಬಂದಿತು. ಮುಂದೆ, ಅತಿ ನಿಧಾನವಾದರೂ ಪರಿಣಾಮಕಾರಿಯಾಗಿ, ನನ್ನ ಕಾಯಿಲೆಯು ಗುಣವಾಗಲು ಇದೇ ನಾಂದಿಯನ್ನು ಹಾಕಿಕೊಟ್ಟಿತು.

"ದಾದಿಯರು ನನ್ನನ್ನು ಸದಾಕಾಲ ಔಷಧಿಯ ಅಮಲಿನಲ್ಲಿಯೇ ಇಟ್ಟಿದ್ದರು. ಪ್ರತಿದಿನ ಬೆಳಗ್ಗೆ ಮತ್ತು ರಾತ್ರಿ ನಾನು ಶ್ರೀರಾಮಕೃಷ್ಣರಿಗೆ ಆರತಿಯನ್ನು ಮಾಡುತ್ತಿದ್ದೆ ಹಾಗೂ ದುರ್ಗಾಸಪ್ತಶತೀ ಪಾರಾಯಣವನ್ನೂ ಮಾಡುತ್ತಿದ್ದೆ. ಈ ವಿಷಮಪರೀಕ್ಷೆಯ ದಿನಗಳಲ್ಲಿ ನನ್ನ ಮನಸ್ಸು ಶಾಂತವಾಗಿತ್ತು; ನಿಶ್ಚಲವಾಗಿತ್ತು; ಭಯರಹಿತವಾಗಿತ್ತು. ಅಂದಿನ ದಿನಗಳಲ್ಲಿ ನಾನು ಶ್ರೀರಾಮಕೃಷ್ಣರಿಗೆ ನನ್ನನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡಿದ್ದೆ.

"ನನ್ನ ಆರೈಕೆ ಮತ್ತು ಶುಶ್ರೂಷೆಗಳನ್ನು ಆಸ್ಪತ್ರೆಯ ದಾದಿಯರು ಬಹಳ ಅತ್ಯುತ್ತಮವಾಗಿ ಮಾಡುತ್ತಿದ್ದರು. ಅವರೆಲ್ಲ ಶ್ರೀರಾಮಕೃಷ್ಣರ ಭಾವಚಿತ್ರವನ್ನು ನೋಡಿ, 'ಇವರು ಯಾರು?' ಎಂದು ಕೇಳುತ್ತಿದ್ದರು. 'ಇವರು ಭಗವತ್ಸ್ವರೂಪರು, ಸಾಕ್ಷಾತ್ ಏಸುಕ್ರಿಸ್ತರು' ಎಂದು ನಾನಾಗ ಉತ್ತರಿಸುತ್ತಿದ್ದೆ. ಶ್ರೀರಾಮಕೃಷ್ಣರ ಬಗ್ಗೆ ಇತರ ವಿವರಗಳನ್ನು ಹೇಳುವ ಸ್ಥಿತಿಯಲ್ಲಿ ನಾನಾಗ ಇರಲಿಲ್ಲ. ಕ್ರಿಸ್‌ಮಸ್ ಹಬ್ಬ ಹತ್ತಿರವಾಗುತ್ತಿತ್ತು. ಆದ್ದರಿಂದ ಆ ದಾದಿಯರಿಗೆ, ಶ್ರೀರಾಮಕೃಷ್ಣರ ದೇಹದಲ್ಲಿ ಏಸುಕ್ರಿಸ್ತನು ಐಕ್ಯವಾದ ಘಟನೆಯನ್ನು ಹೇಳಿದೆ. ಹಾಗೆಯೇ ಶ್ರೀರಾಮಕೃಷ್ಣ ಮತ್ತು ಏಸುಕ್ರಿಸ್ತರು ಒಂದೇ ಎಂಬುದನ್ನು ಕೂಡ ಒತ್ತಿ ಹೇಳಿದೆ. ದಾದಿಯರು ನನ್ನ ಗುರುವಿನ ಬಗ್ಗೆ ಕೇಳಿದರು. ಆಗ ನಾನು ಅವರಿಗೆ ಹೇಳಿದೆ: 'ನನ್ನ ಇಷ್ಟದೇವತೆಯೊಡನೆ ನನ್ನನ್ನು ಐಕ್ಯಗೊಳಿಸುವ ಆಧ್ಯಾತ್ಮಿಕ ಗುರು ಇವರು.'

"ರಾತ್ರಿಯ ವೇಳೆ ದಾದಿಯರು ನನಗೆ ಗಂಧದ ನೀರಿನಲ್ಲಿ ಸ್ನಾನ ಮಾಡಿಸಿ, ನಾನು ಉಲ್ಲಾಸದಿಂದ ಇರುವಂತೆ ಮಾಡುತ್ತಿದ್ದರು. ರಾತ್ರಿಯೆಲ್ಲಾ ಎಚ್ಚರವಾಗಿದ್ದುಕೊಂಡು, ನನಗೆ ಯಾವ ತೊಂದರೆಯೂ ಆಗದಂತೆ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. "ನಿಮಗೆ ಈ ಕೊಠಡಿಯನ್ನು ಬಿಟ್ಟುಹೋಗಲು ಆಸೆಯಾಗುವುದಿಲ್ಲವೇ?" ಎಂದು ಕೂಡ ಕೇಳುತ್ತಿದ್ದರು. ಆಗ ನಾನು ಶ್ರೀರಾಮಕೃಷ್ಣರ ಭಾವಚಿತ್ರದೆಡೆಗೆ ಕೈತೋರಿಸಿ ಹೇಳುತ್ತಿದ್ದೆ: 'ಅವರು ನನ್ನನ್ನು ಸೆಳೆಯುತ್ತಿದ್ದಾರೆ' ಎಂದು.

"ಒಮ್ಮೆ ನಾನು ಸಹಿಸಲು ಅಸಾಧ್ಯವಾದ ದಾರುಣ ನೋವಿನಿಂದ ನರಳುತ್ತಿದ್ದೆ. ಬೆಳಗಿನ ಜಾವ ಎರಡು ಗಂಟೆಯ ಸಮಯ. ನನಗೆ ಶಸ್ತ್ರಚಿಕಿತ್ಸೆ ಮಾಡಿದ ವೈದ್ಯರಾದ ಡಾ. ಎಮ್. ಸಿ. ಸೆಫ್ರಿಡ್ ಅವರು ಅಚಾನಕ್ಕಾಗಿ ಅಲ್ಲಿಗೆ ಬಂದರು. ನಾನು ಹೇಗಿರುವೆನೆಂದು ವಿಚಾರಿಸಿದರು. ಆಗ ನನ್ನ ಪರಿಸ್ಥಿತಿ ನೋಡಿ, ಒಡನೆಯೇ ನಿದ್ರೆಯ ಔಷಧಿಯನ್ನು ಕೊಡಲು ಆದೇಶಿಸಿದರು. ಇಂತಹ ವೇದನೆಯ ಸಮಯದಲ್ಲಿ ಶ್ರೀರಾಮಕೃಷ್ಣರೇ ನನ್ನ ಸಹಾಯಕ್ಕೆ ಬಂದರೆಂದು ನನಗೆ ಅನ್ನಿಸಿತು. ಶಸ್ತ್ರಚಿಕಿತ್ಸೆಯಾದ ನಂತರ ಅವರ ಮೊದಲ ಭೇಟಿಯಾದಾಗ, ಎಮ್. ಸಿ. ಸೆಫ್ರಿಡ್ ಹೀಗೆ ಉದ್ಗರಿಸಿದರು : 'ಇದೊಂದು ಅದ್ಭುತ ಪವಾಡವೇ ಸರಿ!' ನನ್ನನ್ನು ಹೆನ್ರಿ ಫೋರ್ಡ್ ಆಸ್ಪತ್ರೆಯಲ್ಲಿ ಪರೀಕ್ಷೆ ಮಾಡಿದಾಗ, ನನ್ನ ಮಿದುಳಿನಲ್ಲಿ ರಕ್ತಸ್ರಾವವಾಗಿರುವುದನ್ನು ಅವರು ಗಮನಿಸಿದ್ದರು. ನನ್ನ ಜೀವವನ್ನು ಉಳಿಸಿದ್ದಕ್ಕಾಗಿ, ಎಲ್ಲರೂ ಅವರನ್ನು ಪ್ರಶಂಸಿಸಬೇಕೆಂದು ನಾನು ಅವರಿಗೆ ಹೇಳಿದೆ. ಈ ಮೂಲಕ ನನ್ನ ಕೃತಜ್ಞತೆಗಳನ್ನು ಅವರಿಗೆ ಸಮರ್ಪಿಸಿದೆ. ಶ್ರೀರಾಮಕೃಷ್ಣರ ಕೃಪೆಯೇ ಈ ವೈದ್ಯರ ಮೂಲಕ ಹರಿದುಬಂದು, ನಾನು ಸಹಜಸ್ಥಿತಿಗೆ ಮರಳಲು ಕಾರಣವಾಯಿತೆಂದು ನನ್ನ ದೃಢ ನಂಬಿಕೆ. ಕೆಲವರು ಈ ಬಗ್ಗೆ ನನ್ನಲ್ಲಿ ತಮ್ಮ ಸಂದೇಹವನ್ನು ವ್ಯಕ್ತಪಡಿಸಿದರು. ಆಗೆಲ್ಲಾ, 'ಯಾರು ಈ ಜೀವವನ್ನು ಉಳಿಸಲು ಇಷ್ಟೆಲ್ಲಾ ಮಾಡಿದ್ದಾನೆಯೋ, ಅವನು ಎಂದಾದರೂ ನನ್ನನ್ನು ಅಸಮರ್ಥಳನ್ನಾಗಿ ಮಾಡುವನೇ?' ಎಂದು ಕೇಳಬೇಕು ಎಂದೆನಿಸುತ್ತಿತ್ತು.

"ಶ್ರೀರಾಮಕೃಷ್ಣರನ್ನು ನಾನು ಪ್ರತಿನಿತ್ಯ ಹೀಗೆ ಪ್ರಾರ್ಥನೆ ಮಾಡುತ್ತೇನೆ: 'ಹೇ ರಾಮಕೃಷ್ಣ! ನನ್ನನ್ನು ನಿನ್ನ ಬಳಿ ಸೆಳೆದುಕೊಂಡು, ಒಂದು ದಿನ ನಿನ್ನಲ್ಲಿ ನನ್ನನ್ನು ಐಕ್ಯಗೊಳಿಸಿಕೊಂಡುಬಿಡು, ತಂದೆ' ಎಂದು."

ಪ್ರಾರ್ಥನೆಯ ಅದ್ಭುತ ಶಕ್ತಿಯ ಬಗ್ಗೆ ಡಾ. ಕ್ಯಾರೆಲ್ ಮತ್ತೂ ಹೀಗೆ ಬರೆಯುತ್ತಾರೆ: "ಪ್ರಾರ್ಥನೆಯಲ್ಲಿನ ಶಕ್ತಿಯು ಭೂಮಿಯಲ್ಲಿ ಹುದುಗಿರುವ ಗುರುತ್ವಾಕರ್ಷಣ ಶಕ್ತಿಯಷ್ಟೇ ಸತ್ಯವಾದುದು. ಎಲ್ಲ ಚಿಕಿತ್ಸಾಕ್ರಮಗಳೂ ವಿಫಲವಾದಾಗ, ಪ್ರಶಾಂತಭಾವದಲ್ಲಿ ಮಾಡಿದ ಪ್ರಾರ್ಥನೆಯು ಗುಣಕಾರಕವಾಗಿ ರೋಗಿಗಳ ಮನಸ್ಸಿನ ದುಗುಡವನ್ನು ದೂರಗೊಳಿಸಿರುವ ಅನೇಕ ನಿದರ್ಶನಗಳನ್ನು ನಾನು ವೈದ್ಯನಾಗಿ ಕಂಡಿರುವೆನು. ನನ್ನ ಅಭಿಪ್ರಾಯದಲ್ಲಿ ಇಡೀ ಪ್ರಪಂಚದಲ್ಲಿ, ಪ್ರಾರ್ಥನಾಶಕ್ತಿಯೊಂದೇ 'ಪ್ರಕೃತಿ ನಿಯಮ'ವನ್ನು ನಿವಾರಿಸಲು ಶಕ್ಯವಾದ ಏಕಮೇವ ಅಂಶವಾಗಿದೆ."

ಇಂದಿನ ದಿನಗಳಲ್ಲಿ ಪ್ರಾರ್ಥನೆಯು ಗುಣಕಾರಕ ಶಕ್ತಿಯಾಗಿ ಪರಿಣಮಿಸಿದ ಈ ಬಗೆಯ ಸಂದರ್ಭಗಳನ್ನು 'ಪವಾಡ' ಎಂಬ ಹೆಸರು ಕೊಟ್ಟುಬಿಡುತ್ತೇವೆ. ಆದರೆ ಪ್ರಾರ್ಥನೆಯು ನಮ್ಮ ದೈನಂದಿನ ಜೀವನವನ್ನು ಪರಿಣಾಮಕಾರಿಯಾಗಿ ಮುನ್ನಡೆಸಲು ನಿರಂತರ ಶಕ್ತಿಯನ್ನು ನೀಡುತ್ತದೆ ಎಂಬುದನ್ನು ನಾವು ಮರೆಯಬಾರದು. ಈ ರಹಸ್ಯವನ್ನು ಕಂಡುಕೊಂಡ ಹಲವಾರು ಸ್ತ್ರೀಪುರುಷರ ಹೃದಯದಲ್ಲಿ ಸತತ ಹಾಗೂ ಮೌನವಾಗಿ ಇಂಥ 'ಪವಾಡ'ಗಳು ನಡೆಯುತ್ತಲೇ ಇರುತ್ತವೆ ಎಂಬುದನ್ನು ನಾವು ಗಮನಿಸಬೇಕು.

(**ಕೃಪೆ :** *ಭವನ್ಸ್ ಜರ್ನಲ್, ಆಗಸ್ಟ್ ೩೧, ೨೦೧೨*)